# ಶ್ರೀವಿಜಯದಾಸರ ಸುಳಾದಿ ವೈಭವ

## ಸ್ತೋತ್ತಮರ ನಿಂದಾವರ್ಜನ ಸುಳಾದಿ - 2

-ಡಾ|| ಪಂ|| ಚತುರ್ವೇದಿ ವೇದವ್ಯಾಸಾಚಾರ್ಯ

2. ಮಟ್ಟತಾಳ

ಸಲ್ಲದು ಸಲ್ಲದು ಭಯ ಹಾರಿಯ ಭಕ್ತರ
ನಿಲ್ಲದೆ ದೂಷಿಸುವ ನಿಷ್ಠುರವಚನಗಳು
ಎಲ್ಲಿದ್ದರೆ ಏನು ಎಂತು ನಡೆದರೇನು
ಬಲ್ಲಿದರು ಕಾಣೊ ಅವರು ಜಗತ್ತಿನೊಳು
ಸಲ್ಲುವರು ಹರಿಯ ಪಾದಪಲ್ಲವಸೇವಿಗೆ
ಬಲ್ಲವರು ಎನ್ನು ಯೋಗ್ಯತಾನುಸಾರ
ಕಲ್ಲುಮರನ ತೆರದಿ ಕಾಣಿಸಿಕೊಳುತಿಪ್ಪರು
ಎಲ್ಲ ಕರ್ಮಕೆ ಹರಿ ತಾನೆ ಪ್ರೇರಿಸುವನು
ಮಲ್ಲಮರ್ದನ ನಮ್ಮ ವಿಜಯವಿಠ್ಠಲ ನಿತ್ಯ
ವಲ್ಲಭ ನಮಗೆಂದು ನಲಿದಾಡುವರೊ ||2||

2. ಸಲ್ಲದು ಸಲ್ಲದು ಭಯ ಹಾರಿಯ ಭಕ್ತರ...

ಹರಿಗೆ ಸಂಬಂಧಿಸಿದ (ಹಾರಿಯ) ಹರಿದಾಸ ವರ್ಗದವರಿಗೆ ಇತರರ ದುರ್ನುಡಿಗಳಿಂದ ಯಾವುದೆ ಭಯ ಬೇಕಾಗಿಲ್ಲ. ಶ್ವಾನ ಬೊಗಳಿದರೆ ಅದರ ಕಂಠಶೋಷಣೆ ಹೊರತು ಸ್ವರ್ಗಕ್ಕೇನು ಹಾನಿ ? ಹರಿಯ ನಾಮಾಮೃತವನ್ನು ನಿತ್ಯವೂ ಪಾನ ಮಾಡುತ್ತಿರುವ ಅವರು ಮಹಾಪುಣ್ಯವಂತರು (ಬಲ್ಲಿದರು) ಇಂತಹವರನ್ನು ಎಲ್ಲೆ ಆಗಲಿ, ಯಾವ ರೀತಿಯದ್ದೆ ಆಗಲಿ ನಿಷ್ಠುರ ಮಾತುಗಳು ಅವರು ಎಲ್ಲೆ ಹೋದರೂ ಹರಿಗೆ ಸಲ್ಲುವರಾದ್ದರಿಂದ ಅವರಿಗೆ ಯಾವುದೇ ಭಯವಿರುವುದಿಲ್ಲ. ಹರಿಯ ಪಾದಪಲ್ಲವ ಸೇವೆಗೆ ಕಂಕಣತೊಟ್ಟ ಇವರು ಯಾರೇ ಏನೆ ಅಂದರು ಅದರಿಂದ ಹಿಂಜರಿಯರು. ಹರಿಯ ತಿಳಿದ ಈ ಜನ ನಿಂದಿಸುವವರಿಗೆ ಕಲ್ಲುಬಂಡೆಯಂತೆಯೂ ಮಹಾನ್ ವೃಕ್ಷದಂತೆ ತೋರಿಸುತ್ತಾ ನಿಂದಾ ಮಾತುಗಳಿಗೆ ಕಿವಿಗೊಡರು. ಬೂದಿಮುಚ್ಚಿದ ಕೆಂಡದಂತೆ ತಮ್ಮ ನಿಜಯೋಗ್ಯತೆ ಮುಚ್ಚಿಕೊಂಡು ಸಂಚರಿಸುವರು. ಎಲ್ಲಾ ಕರ್ಮಕ್ಕೆ ಶ್ರೀಹರಿ ತಾನೆ ಪ್ರೇರಕ. ಅವರು ನಿಂದಿಸುವಂತೆ ಪ್ರೇರಿಸಿದವನೂ ಶ್ರೀಹರಿಯೇ. ಮಲ್ಲರನ್ನೂ ಮರ್ದಿಸುವ ವಿಜಯವಿಠಲ ನಿತ್ಯವಲ್ಲಭ ನಮಗೆಂದು ಸಂತೋಷದಿಂದ ಕಾಲಕಳೆವರು.

3. ತ್ರಿವಿಡತಾಳ

ಇಂತಿಪ್ಪ ಭಗವದ್ಭಕ್ತರನ ನಿಂದ್ಯ ಮಾಡುವವ
ಹಂತಮಾನವರ ಗತಿಯು ಕೇಳು ಎಲೆ ಮನವೆ
ಸಂತತಿಸಹವಾಗಿ ನರಕದಲ್ಲಿ ಬಿದ್ದು
ಸಂತತದಲಿ ಬಳಲಿ ಆ ತರುವಾಯದಲ್ಲಿ ಪುಟ್ಟಿ
ಕಾಂತಾರದಲಿ ಪಿಶಾಚಿದೇಹವ ತೆತ್ತು
ಸಂತಾಪದಲಿ ಬೆಂದು ಹೊರಳೂವರು
ಪಿಂತೆ ಪಾರ್ವತಿಪತಿಯ ನಿಂದಿಸಿ ದಕ್ಷನು
ಎಂತಾದನು ನೋಡು ಸುರರ ಮಧ್ಯ
ಮುಂತೆ ಯದುಕುಲದವರು ಮುನಿಯವಂಚಿಸಲಾಗಿ
ಅಂತಕನ ಸಾರಿದರು ತಮಗೆ ತಾವೇ
ನಿಂತ ಗೋಷ್ಪಾದೋದಕ ದಾಟಲಾರದಲಿದ್ದ
ಮಂತ್ರೋಕ್ತಮುನಿವಾಲಿಖಿಲ್ಯಾಜನರ
ಭ್ರಾಂತಿಯಿಂದಲಿ ಬಲುವ್ಯಾಕುಲ ಐದಿದನು
ಸಂತಜನರ ನಿಂದ್ಯ ಒಳಿತಲ್ಲ ಒಳಿತಲ್ಲ
ಜಂತುಗಳ ಅಂತಃಕರಣದ ಪರಿಯಲ್ಲಿ
ಸಂತಿಹ್ಯದೊ ಬಲ್ಲವರಾರೊ ವೃತ್ತಿ
ಎಂಥವನಾದರೂ ಉತ್ತಮರ ಹಳಿದರೆ
ಶಾಂತನಾಗದೆ ಪೋಗಾ ಜ್ಞಾನಿಯಾಗೆ
ಪಂಥವೆ ಬಿಡುಬಿಡು ಹೃದಯದೊಳಗೆ ಇದ್ದ
ಗ್ರಂಥಿಯ ಕಳೆಕೊಂಬ ಯೋಗವಲ್ಲ
ಕಿಂತು ಬುದ್ಧಿಯಲಿಂದ ಕೆಟ್ಟುಪೋದರೆ ಸ-
ತ್ಪಂಥ ದೊರಕದು ಕಾಣೊ ನಾನಾಕರ್ಮ
ತಂತ್ರಮಂತ್ರಗಳಿಂದ ಮಾಡಿದ ಕಾಲಕ್ಕೊ
ಇಂತು ಮಹಾತ್ಮರ ನಿಂದ್ಯೆ ಒಂದೇ
ಅಂತರಂಗದಲಿ ಯೋಚಿಸಲು ಸ್ವಹಾ-
ಕಾಂತಾ ಮೇಲುವನಯ್ಯ ಎಲ್ಲಾ ಪುಣ್ಯ
ಸಂತೋಷದಲಿ ಮನುಜ ರತ್ನಭಾಂಡವ ರಚಿಸಿ
ಶಾಂತವಾಗಿದ್ದ ಕಪಿಲಾವಿನ ಹಾಲು
ಕ್ಲಾಂತಾರಹಿತನಾಗಿ ತುಂಬಿದ ಮೇಲೊಂದು
ತಂತಿ ಮನೆಯಲ್ಲಿ ಅದ್ದಿ ಮಧ್ಯದ ಬಿಂದು
ಪ್ರಾಂತಿಗೆ ಹಾಕಲು ಶುದ್ಧವಾಹದೆ, ಆದ-

Scanned by CamScanner

ದಂತೆ ತಿಳಿಯಬೇಕು ಮಾಳ್ಪನ್ಯಾ
ಕಂತುಜನಕ ನಮ್ಮ ವಿಜಯವಿಠಲರೇಯ
ಎಂಥ ಮಾತಿಗೆ ಒಲಿಯ ಇದು ಇಲ್ಲದವಗೆ ಊಳಿಗ ‖ 3 ‖

**3. ಇಂತಿಪ್ಪ ಭಗವದ್ಭಕ್ತರನ ನಿಂದ್ಯ ಮಾಡುವವ....**

ಇಂತಿಪ್ಪ ಭಗವದ್ಭಕ್ತರನ್ನು ನಿಂದೆ ಮಾಡುವವರು. ಅವರನ್ನು ಕೊಲ್ಲುವ ಬ್ರಹ್ಮಹತ್ಯಗೈದವರ ಗತಿ ಅಧೋಗತಿ. ಇಂತಹವರು ತಾವು ಮಾತ್ರವಲ್ಲ, ತಮ್ಮ ಸಂತತಿ ಸಹಿತವಾಗಿ ನರಕಕೂಪದಲ್ಲಿ ಬಿದ್ದು ಅಲ್ಲಿ ನಾನಾವಿಧ ಯಾತನೆ ಅನುಭವಿಸಿ, ಬಳಿಕ ಬೆಂಡಾಗಿ ಪುನಃ ಭೂಮಿಯಲ್ಲಿ ಹುಟ್ಟುವರು. ಮಹಾಗೊಂಡಾರಣ್ಯದಲ್ಲಿ ಪಿಶಾಚಿ ದೇಹವನ್ನು ಪಡೆವರು. ಪಿಶಾಚಿ ಜನ್ಮದಲ್ಲಿ ಆಹಾರ ನೀರು ಇಲ್ಲದೆ ದುಃಖದಿಂದ ಬಳಲುವರು.

**ಪಿಂತೆ ಪಾರ್ವತಿಪತಿಯ ನಿಂದಿಸಿ –**

ಹಿಂದೆ ಪಾರ್ವತೀ ಪತಿಯಾದ ರುದ್ರದೇವನನ್ನು ನಿಂದಿಸಿದ ದಕ್ಷ ಪ್ರಜಾಪತಿಯು ತಲೆ ತೆಗೆದುಕೊಂಡು, ದೇವತಾಮಧ್ಯದಲ್ಲಿ ತಲೆಯೆತ್ತದಂತೆ ಬಸ್ತಮುಖನಾದ.

ದ್ವಾಪರದಲ್ಲಿ ಯದುಕುಲ ಐದು ಸಾವಿರ ಮಂದಿ ಯಾದವರು. ವಿಶ್ವಾಮಿತ್ರಾದಿಗೆ ಅಪಹಾಸ್ಯಕ್ಕಾಗಿ ಸಾಂಬನಿಗೆ ಸ್ತ್ರೀವೇಷ ಹಾಕಿ, ಇವಳಿಗೆ ಯಾವ ಮಗು ಹುಟ್ಟುತ್ತದೆ ಎಂದು ಹೇಳಿರಿ ಎಂದಾಗ, 'ಇವನು ಹಡೆಯುವ ಮುಸಲದಿಂದ ಯಾದವ ಕುಲವೇ ನಾಶ ಹೊಂದುತ್ತದೆ' ಎಂದು ಶಪಿಸಿದರು. ಇದರಂತೆ ಮುಸಲದಿಂದ ಬೆಳೆದ ಜೊಂಡು ಹುಲ್ಲಿನಿಂದಲೆ ಪರಸ್ಪರ ಕಾದಾಡಿ ಸತ್ತರು.

ವಾಲಿಖಿಲ್ಯರು 60 ಸಾವಿರ ಮಂದಿಯಿದ್ದು ಹೆಬ್ಬೆಟ್ಟಿನಷ್ಟು ಅವರ ಗಾತ್ರ ಕಶ್ಯಪರು ಒಂದು ಯಜ್ಞ ಪ್ರಾರಂಭಿಸಿದರು. ಆ ಯಜ್ಞದಲ್ಲಿ ಪಾಲ್ಗೊಂಡ ಇವರು ಗೋವು ನಿಂತಷ್ಟು ನೀರನ್ನು ದಾಟಲಾಗದೇ ಸುಮ್ಮನೆ ನಿಂತಿದ್ದರು. ಇವರ ಸ್ಥಿತಿ ನೋಡಿ ಇಂದ್ರದೇವರು ಅಪಹಾಸ್ಯ ಮಾಡಿದರು. ಇವರು ಗರುಡ ನಿನ್ನ ಗರ್ವ ಮುರಿಯುವನೆಂದು ಶಪಿಸಿದರು. ಐದಿದನು ಎಂದಿದ್ದಾರೆ. ಇದರಿಂದಾಗಿ ಸಂತಜನರ ನಿಂದನೆ ಯಾರಿಗೂ ಒಳಿತಲ್ಲ, ಯಾವ ಪುರುಷರಲ್ಲಿ ಏನು ಶಕ್ತಿಯಿದೆಯೋ ತಿಳಿಯಲಾಗದು. ಅವರು ಮಾಡುವ ವೃತ್ತಿ ನೀಚ ವೃತ್ತಿಯೆ ಆಗಿದ್ದರೂ ಅವರ ಶಕ್ತಿ ತಿಳಿಯದೆ ನಿಂದಿಸಬಾರದು.

ಧರ್ಮವ್ಯಾಧನು ವೃತ್ತಿಯಲ್ಲಿ ಮಾಂಸ ಮಾರುವವನಾದರೂ ಭಗವದ್ಭಕ್ತನಾಗಿದ್ದ ಅವನ ವ್ಯಾಪಾರ ನೋಡಿದ ಕೌಶಿಕ ಬ್ರಾಹ್ಮಣ ಹಳಿದ. ನಿಜವರಿತು ಕ್ಷಮೆ ಕೇಳಿದ.

ಇದರಿಂದಾಗಿ ನೋಡಲು ಎಂತಹವನಾಗಿದ್ದರೂ ಅವನ ನಿಜಸ್ವರೂಪ ತಿಳಿಯದೆ ನಿಂದಿಸಿದರೆ ಜೀವನದಲ್ಲಿ ಶಾಂತಿ ಹೊಂದಲಾರ. ಯಾರು ಉತ್ತಮರನ್ನು ಹಳಿಯುವ ಪಂಥವನ್ನು ಪಂಥದವರನ್ನೂ ತ್ಯಜಿಸಬೇಕು. ಹೀಗಾದಾಗ ಮಾತ್ರ ಹೃದಯದಲ್ಲಿದ್ದ ಅಜ್ಞಾನ ಗ್ರಂಥಿಯನ್ನು ಕಳೆದುಕೊಳ್ಳಬಹುದು.



Scanned by CamScanner

ಕಿಂತು ಬುದ್ಧಿಯಲ್ಲಿಂದ ಕೆಟ್ಟುಹೋಗಿ ಅನಿಂದ್ಯರನ್ನು ನಿಂದಿಸಿದರೆ ಸಜ್ಜನರ ಸಂಗ ದೊರೆಯಲಾರದು.

ಸಜ್ಜನರ ನಿಂದೆ ಮಾಡಿ ಅವರಿಗೆ ಘಾಸಿಗೊಳಿಸಿ ಏನೇನು ಪ್ರಾಯಶ್ಚಿತ್ತ ಕರ್ಮಗಳನ್ನಾಚರಿಸಿದರೂ, ಮಂತ್ರಜಪಾದಿಗಳು ಉಪಾಯಗಳನ್ನಾಚರಿಸಿದರೂ ಇಂತು ಮಹಾತ್ಮರನ್ನು ನಿಂದಿಸಿದ ಪಾಪದಿಂದಾಗಿ ಎಲ್ಲವೂ ಸ್ವಾಹಾಕಾಂತ ಅಗ್ನಿದೇವನಿಗೆ ಹಾಕಿದ ಸಕಲ ವಸ್ತುಗಳು ನಾಮಾವಶೇಷವಾಗುವಂತೆ ಮಂತ್ರ ತಂತ್ರಾದಿಗಳೂ ನಿಂದಾಗ್ನಿಯಲ್ಲಿ ಬಿದ್ದು ಭಸ್ಮವಾಗುತ್ತವೆ.

**ಮನುಜ ರತ್ನಭಾಂಡವ ರಚಿಸಿ–**

ಇದಕ್ಕೊಂದು ದೃಷ್ಟಾಂತ ನೋಡಿ. ಮಾನವರು ರತ್ನದ ಪಾತ್ರೆಯನ್ನು ತಯಾರಿಸಿ, ಶಾಂತಸ್ವರೂಪದ ಕಪಿಲೆಯ ಹಾಲನ್ನು ತುಂಬಿಸಿ, ಒಂದು ತಂತಿಯನ್ನು ಮದ್ಯದಲ್ಲಿ ಅದ್ದಿ ಅದರಿಂದ ಒಂದು ಹನಿ ಮದ್ಯವನ್ನು ಆ ಹಾಲಲ್ಲಿ ಹಾಕಿದರೆ ಆ ಹಾಲು ಅಶುದ್ಧವಾಗಿ ಪೂಜಾದಿಗಳಿಗೆ ಬಾರದಂತೆ ಇರುವುದೋ ಹಾಗೆಯೇ ಇವರು ಮಾಡಿದ ಪುಣ್ಯ ಹಾಳಾಗುತ್ತದೆ. ಇಂತಹ ಮಾತುಗಳಿಗೆ ಶ್ರೀಹರಿ ಒಲಿಯುವುದಿಲ್ಲ. ಇಂತಹ ದೋಷವಿಲ್ಲದವರಿಗೆ ತಾನು ಸೇವಕನಂತೆ ಸೇವಿಸುವ.

(ಸಶೇಷ)

Scanned by CamScanner